2	ಸಿಎಂಎಸ್‌ಎಂಟಿಡಿಪಿ	158.30	0.00	151.60	0.00
3	12ನೇ ಹಣಕಾಸು	11.04	3.80	38.84	31.43

ಇ) ವಿವಿಧ ಯೋಜನೆಗಳಲ್ಲಿನ ಅನುದಾನವನ್ನು ಆರು ತಿಂಗಳ ಅವಧಿಯ ಒಳಗಾಗಿ ಬಳಕೆ ಮಾಡಲು ಸೂಚನೆಯನ್ನು ನೀಡಲಾಗಿದೆ.

ಸ್ಥಳೀಯ ಸಂಸ್ಥೆಯ ಹೆಸರು	ವಿವಿಧ ಯೋಜನೆಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿದ ದಿನಾಂಕಗಳು		
	ಎಸ್‌ಎಫ್‌ಸಿ (ಮುಕ್ತನಿಧಿ)	ಸಿಎಂಎಸ್ ಎಂಟಿಡಿಪಿ	12ನೇ ಹಣಕಾಸು ಯೋಜನೆ
ಚಿಕ್ಕಬಳ್ಳಾಪುರ	ಅಕ್ಟೋಬರ್ 2009	ಪ್ರಾರಂಭಿಸಿಲ್ಲ	ಡಿಸೆಂಬರ್ 2009
ಚಿಂತಮಣಿ	17–02–2010	17–02–2010	13–11–2009
ಶಿಡ್ಲಘಟ್ಟ	13–02–2010	13–02–2010	15–12–2009
ಗೌರಿಬಿದನೂರು	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	21–12–2009
ಬಾಗೇಪಲ್ಲಿ	ಪ್ರಾರಂಭಿಸಿಲ್ಲ	ಪ್ರಾರಂಭಿಸಿಲ್ಲ	20–02–2010
ಗುಡಿಬಂಡೆ	15–02–2010	ಪ್ರಾರಂಭಿಸಿಲ್ಲ	21–01–2010

ಮೈಸೂರಿನ ಜಯಪುರ ಹೋಬಳಿಯ ನರ್ಮ್ ಕಾಮಗಾರಿ ಬಗ್ಗೆ

228 (06) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನರಚನೆ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರ ಹಾಗೂ ಜಯಪುರ ಹೋಬಳಿಯ ಕೆಲವು ಗ್ರಾಮಗಳಿಗೆ ನರ್ಮ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ ಕಾಮಗಾರಿ ಪ್ರಾರಂಭಿಸುವುದು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು ಹಾಗೂ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಿಕೊಡಲಾಗುವುದು;

ಇ) ಈ ಯೋಜನೆಯಡಿಯಲ್ಲಿ ಜಮೀನುಗಳನ್ನು ಕಳೆದುಕೊಂಡ ರೈತರುಗಳಿಗೆ ಅತಿ ಕಡಿಮೆ ಪರಿಹಾರದ ಮೊತ್ತವನ್ನು ನಿಗದಿಪಡಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಪರಿಹಾರದ ಮೊತ್ತವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಕರೆಯೊಂದಕ್ಕೆ ಎಷ್ಟು ಪರಿಹಾರದ ಮೊತ್ತವನ್ನು ನೀಡಲಾಗುವುದು;

ಉ) ಈ ಯೋಜನೆಯಡಿಯಲ್ಲಿ ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯಲ್ಲಿ ಕೈಬಿಟ್ಟು ಹೋಗಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಗ್ರಾಮಗಳಿಗೂ ಶಾಶ್ವತ ಕುಡಿಯುವ ನೀರೊದಗಿಸಿಕೊಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಮಾಹಿತಿಯನ್ನು ನೀಡುವುದು);

ಋ) ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ 54 ಗ್ರಾಮಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರೊದಗಿಸುವ ಕಾಮಗಾರಿಯು ಇದುವರೆವಿಗೂ ಪೂರ್ಣಗೊಳ್ಳದೆ ವಿಳಂಬವಾಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

ಎ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು ಹಾಗೂ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಿಕೊಡಲಾಗುವುದು?

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಶುದ್ಧೀಕರಣಗಾರದ ಜಮೀನಿನ ಭೂಸ್ವಾಧೀನತೆಯಲ್ಲಿ ಬೆಲೆ ನಿಗದಿ ಬಗ್ಗೆ ರೈತರ ಆಕ್ಷೇಪವಿದ್ದುದರಿಂದ, ಅವುಗಳನ್ನು ಬಿಟ್ಟು ಉಳಿದ ಕಾಮಗಾರಿಗಳು ಈಗಾಗಲೇ ಪ್ರಾರಂಭಿಸಲಾಗಿದೆ. ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣ ಗೊಳಿಸಲು ಉದ್ದೇಶಿಸಿದೆ.

ಇ) ಯೋಜನೆಯಡಿಯಲ್ಲಿ ಮುಖ್ಯಸ್ಥಾವರ, ಶುದ್ಧೀಕರಣ ಘಟಕ ಹಾಗೂ ಬ್ರೇಕ್ ಪ್ರೆಷರ್ ಟ್ಯಾಂಕ್‌ಗಳ ನಿರ್ಮಾಣಕ್ಕಾಗಿ, ಬಿದರಗೂಡು, ಕೆಂಬಾಲು ಹಾಗೂ ಉದ್ದೂರು ಗ್ರಾಮಗಳ ಕೆಲವು ಸರ್ವೆ ನಂಬರುಗಳಲ್ಲಿನ ಜಮೀನಿನ ಭೂಸ್ವಾಧೀನತೆಗಾಗಿ ಭೂಸ್ವಾಧೀನತಾ ಪ್ರಕರಣ ಜರುಗಿದ್ದು, ನಿಯಮಾನುಸಾರ ಬೆಲೆ ನಿರ್ಧರಿಸಲಾಗಿದ್ದು, ಮಾರುಕಟ್ಟೆ ದರಗಳಿಗನುಗುಣ ವಾಗಿಲ್ಲವೆಂದು ರೈತರು ತಿಳಿಸಿರುತ್ತಾರೆ.

ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಯವರು ಭೂಸ್ವಾಧೀನ ಪ್ರಕ್ರಿಯೆ ಬದಲಾಗಿ ಒಪ್ಪಂದದ ಆಧಾರದಲ್ಲಿ ಭೂಮಿ ಪಡೆಯಲು ಸೂಚಿಸಿರುವಂತೆ ಪ್ರಕ್ರಿಯೆ ಮುಂದುವರೆದಿದೆ.

ಈ) ಈಗಾಗಲೇ ಜಿಲ್ಲಾಡಳಿತವು ಸದರಿ ಜಮೀನಿನ ರೈತರೊಂದಿಗೆ ಮಾತುಕತೆ ನಡೆಸಿದ್ದು, ಹೆಚ್ಚಿನ ಪರಿಹಾರದೊಡನೆ "ಒಪ್ಪಂದ ಅವಾರ್ಡ್" ಮೇರೆಗೆ ಭೂಮಿಯನ್ನು ಬಿಟ್ಟುಕೊಡಲು ರೈತರು ಒಪ್ಪಿದ್ದು, ಅಂತಿಮ ಹಂತದಲ್ಲಿದೆ. ಹಾಗೂ ರೈತರು ಕಾಮಗಾರಿ ಪ್ರಾರಂಭಿಸಲು ಮೌಖಿಕವಾಗಿ ಒಪ್ಪಿರುತ್ತಾರೆ.

ಉ) ನರ್ಮ್ ಕಾರ್ಯಕ್ರಮದಡಿ ಕಬಿನಿ ನೀರು ಸರಬರಾಜು ಯೋಜನೆಯಡಿ ಮಾರ್ಗಮಧ್ಯದ ಮುಖ್ಯ ಕೊಳವೆ ಮಾರ್ಗದ ರಸ್ತೆಯಿಂದ ಅಕ್ಕಪಕ್ಕದ 2 ಕಿ.ಮೀ. ದೂರದಲ್ಲಿ ಬರುವ 22 ಗ್ರಾಮಗಳಿಗೆ (ಬಿದಿರುಗೂಡು, ಕೆಂಬಾಳು, ದೂರ, ದೊಡ್ಡ ಕಾಟೂರು, ತೋರಣಕಾಟೂರು, ಮಾರ್ಬಳ್ಳಿ ಮತ್ತು ಮಾರ್ಬಳ್ಳಿಹುಂಡಿ, ತಳೂರು, ಕೇಲಹಳ್ಳಿ, ಉದ್ದೂರು ಸಾಲಿಹುಂಡಿ ದೊಡ್ಡಹುಂಡಿ ಮತ್ತು ಕೆರೆಹುಂಡಿ, ಜುಮರ ಕಳಲವಾಡಿ ಚೌಡಳ್ಳಿ, ಗೂರೂರು ಮತ್ತು ಪರಸಯ್ಯನಹುಂಡಿ, ಯಡಹಳ್ಳಿ ಮತ್ತು ಕೋಟೆಹುಂಡಿ, ನಗರತಳ್ಳಿ ಕುಪ್ಪಲೂರು ಕೇರ್ಗಳ್ಳಿ ಮುರದಗಳ್ಳಿ ಸಿಂದಗಳ್ಳಿ, ದನಗಳ್ಳಿ ಮತ್ತು ಕೆಂಚಲಗೂಡು ಗ್ರಾಮಗಳಿಗೆ ಮಾತ್ರ ನೀರೊದಗಿಸಲು ಅನುವು ಮಾಡಲಾಗಿರುತ್ತದೆ.

ಊ) ಈ ಬಗ್ಗೆ ಉಳಿದ ಗ್ರಾಮಗಳ ನೀರು ಸರಬರಾಜಿನ ಬಗ್ಗೆ ಆರ್.ಡಿ.ಪಿ.ಆರ್. ಇಲಾಖೆವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾ ಗಿರುತ್ತದೆ.

ಋ) ಬಂದಿದೆ.

ಎ)

1. ಮೂಲಸ್ಥಾವರದಿಂದ ಸ್ಥಳವನ್ನು ಗುತ್ತಿಗೆದಾರರಿಗೆ 8 ತಿಂಗಳ ತಡವಾಗಿ ನೀಡಲಾಗಿದೆ. ಇದು ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸುವಲ್ಲಿ ಆದ ವಿಳಂಬ.
2. ಮೂಲಸ್ಥಾವರದಲ್ಲಿ ಕಚ್ಚಾ ನೀರಿನ ಏರು ಕೊಳವೆಯನ್ನು ಅಳವಡಿಸುವ ಸಂದರ್ಭದಲ್ಲಿ, ತಮ್ಮ ಗ್ರಾಮಕ್ಕೂ ಸಹ ನೀರು ಕೊಡಬೇಕೆಂದು ಕೋರಿ ಬೆಳಗೊಳ ಗ್ರಾಮದವರು 570 ಮೀ. ಉದ್ದ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಹಾಗೂ ಇದು ವರೆಗೂ ಈ ಸಮಸ್ಯೆಗಳಿಗೆ ಪರಿಹಾರ ದೊರೆತಿರುವುದಿಲ್ಲ.
3. 11 ಕೆ.ವಿ ಎಕ್ಸ್‌ಪ್ರೆಸ್ ಫೀಡರ್ ಮೈನ್ ಅಳವಡಿಸಲು ಈವರೆಗೂ CHESCOM ವತಿಯಿಂದ ಅನುಮತಿ ದೊರೆತಿರುವುದಿಲ್ಲ.
4. ಸದರಿ ಯೋಜನೆಗೆ ಇದುವರೆವಿಗೂ ರೂ. 1250.00 ಲಕ್ಷಗಳು ಆರ್.ಡಿ.ಪಿ.ಆರ್ ವತಿಯಿಂದ ಮಂಡಳಿಗೆ ಬಿಡುಗಡೆಯಾಗಿದ್ದು, ರೂ.2776.00 ಲಕ್ಷಗಳ ಯೋಜನೆಯ ಪರಿಷ್ಕೃತ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ: 946, ದಿನಾಂಕ: 10.07.2009 ರಲ್ಲಿ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಯೋಜನೆಯ ಉಳಿಕೆ ಹಣ ರೂ.1526.00 ಲಕ್ಷಗಳು ಬಿಡುಗಡೆಯಾದ ನಂತರ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯೋಜನೆಯನ್ನು ಚಾಲನೆ ಗೊಳಿಸಲಾಗುವುದು.

ಮೈಸೂರು ಮಂಡಕಳ್ಳಿಯಲ್ಲಿ ವಿಮಾನ ಹಾರಾಟ ಆರಂಭಿಸುವ ಕುರಿತು

229 (7) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?